ಕರ್ನಾಟಕ ವಿಧಾನ ಪರಿಷತ್

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	760 (೯೦೨)
2	ಸದಸ್ಯರ ಹೆಸರು	ಶ್ರೀ ಎಂ.ಎ.ಗೋಪಾಲಸ್ವಾಮಿ
3	ವಿಷಯ	ದಾಖಲೆರಹಿತ ಕಂದಾಯ ಗ್ರಾಮಗಳು
4	ಉತ್ತರಿಸಬೇಕಾದ ದಿನಾಂಕ	10/03/2021
5	ಉತ್ತರಿಸುವ ಸಚಿವರು	ಮಾನ್ಯ ಕಂದಾಯ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆಯಲ್ಲಿ ಗುರುತಿಸಿರುವ ದಾಖಲೆ ರಹಿತ ಕಂದಾಯ ಗ್ರಾಮಗಳೆಷ್ಟು; (ವಿವರ ನೀಡುವುದು)	ಜಿಲ್ಲೆಯಲ್ಲಿ ಒಟ್ಟು 33 ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಪ್ರಸ್ತಾವನೆಗಳಿದ್ದು, ಸದರಿ ಎಲ್ಲಾ ಗ್ರಾಮಗಳು ಪರಿಶೀಲನಾ ಹಂತದಲ್ಲಿರುತ್ತದೆ. ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ತಾಲ್ಲೂಕು	ಖಾಸಗಿ	ಸರ್ಕಾರಿ	ಖಾಸಗಿ/ಸರ್ಕಾರಿ	ಬಾಕಿ
1	ಅರಸೀಕೆರೆ	10	05	13	28
2	ಚನ್ನರಾಯಪಟ್ಟಣ	0	1	1	2
3	ಬೇಲೂರು	1	1	1	3
4	ಆಲೂರು	0	0	0	0
5	ಹಾಸನ	0	0	0	0
6	ಹೊಳೆನರಸೀಪುರ	0	0	0	0
7	ಅರಕಲಗೂಡು	0	0	0	0
8	ಸಕಲೇಶಪುರ	0	0	0	0
	ಒಟ್ಟು	11	07	15	33

ಕ್ರ.ಸಂ	ಪ್ರಶ್ನೆ	ಉತ್ತರ
ಆ)	ಜಿಲ್ಲೆಯಲ್ಲಿ ದಾಖಲೆ ರಹಿತ ಕಂದಾಯ ಗ್ರಾಮಗಳಲ್ಲಿ ವಾಸಿಸುತ್ತಿರುವ ಜನರು ಮೂಲಭೂತ ಸೌಕರ್ಯಗಳಿಲ್ಲದೆ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು;	ಹೌದು, ಕರ್ನಾಟಕ ಭೂಕಂದಾಯ ಕಾಯ್ದೆ 1964ಕ್ಕೆ ಕಲಂ 94ಡಿ ಹಾಗೂ ಕರ್ನಾಟಕ ಭೂಸುಧಾರಣಾ ಕಾಯ್ದೆ 1961ಕ್ಕೆ ಕಲಂ 38ಎ ರಡಿಯಲ್ಲಿ ತಿದ್ದುಪಡಿ ತಂದು ದಾಖಲೆರಹಿತ ಜನವಸತಿಗಳನ್ನು ಕಂದಾಯ ಗ್ರಾಮಗಳಾಗಿ ಘೋಷಿಸಲಾಗುತ್ತಿದೆ. ನಂತರ ಅಲ್ಲಿ ವಾಸಿಸುತ್ತಿರುವ ಕುಟುಂಬಗಳಿಗೆ ವಾಸದ ಹಕ್ಕುದಾಖಲೆಗಳನ್ನು ನೀಡಲು ಕ್ರಮಕೈಗೊಂಡು, ಸಂಬಂಧಪಟ್ಟ ಇಲಾಖೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಸೂಚಿಸಲಾಗುತ್ತಿದೆ.
ಇ)	ದಾಖಲೆ ರಹಿತ ಕಂದಾಯ ಗ್ರಾಮಗಳನ್ನು ಕಂದಾಯ ಗ್ರಾಮಗಳಾಗಿ ಘೋಷಣೆ ಮಾಡಲು ಅನುಸರಿಸುತ್ತಿರುವ ಮಾನದಂಡಗಳೇನು; (ವಿವರ ನೀಡುವುದು)	• ಕನಿಷ್ಠ ಕುಟುಂಬಗಳ ಸಂಖ್ಯೆ ಸುಮಾರು 50 ಅಥವಾ ಜನಸಂಖ್ಯೆ ಸುಮಾರು 250ನ್ನು ಹೊಂದಿರುವ ದಾಖಲೆರಹಿತ ಜನವಸತಿ ಪ್ರದೇಶಗಳು. • ಗ್ರಾಮಕ್ಕಿರಬೇಕಾದ ಜಮೀನಿನ ವಿಸ್ತೀರ್ಣ ಕನಿಷ್ಠ ಸುಮಾರು 100 ಎಕರೆ ಅಥವಾ ಅದಕ್ಕೆ ಮೇಲ್ಪಟ್ಟು-(ಈ ಷರತ್ತನ್ನು ಬೆಟ್ಟಗುಡ್ಡಗಳ ತಪ್ಪಲು ಮತ್ತು ಅರಣ್ಯ ಪ್ರದೇಶಗಳಲ್ಲಿನ ಜನವಸತಿ ಪ್ರದೇಶಗಳ ಪ್ರಕರಣದಲ್ಲಿ ಸಕಾರಣದ ಸಮೇತ ಸಡಿಲಿಸಬಹುದು) • ಮೂಲ ಗ್ರಾಮತಾಣಕ್ಕೆ ಹೊಂದಿಕೊಂಡಿರಬಾರದು.(ಮೂಲ ಗ್ರಾಮತಾಣದಿಂದ ಅಂದಾಜು 1 ಕಿ.ಮೀ ಅಂತರ ಸೂಕ್ತ)

ಈ)	ಜಿಲ್ಲೆಯಲ್ಲಿನ ದಾಖಲೆ ರಹಿತ ಕಂದಾಯ ಗ್ರಾಮಗಳನ್ನು ಕಂದಾಯ ಗ್ರಾಮಗಳಾಗಿ ಘೋಷಣೆ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)	• ಮಾನ್ಯ ಮುಖ್ಯಮಂತ್ರಿ ರವರು ಪ್ರಗತಿ ಪರಿಶೀಲನಾ ಸಭೆಯಲ್ಲಿ ಕಂದಾಯ ಗ್ರಾಮಗಳ ರಚನಾ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿರುತ್ತಾರೆ. • ಮಾನ್ಯ ಕಂದಾಯ ಸಚಿವರ ವಿಡಿಯೋ ಸಂವಾದ ಸಭೆಯಲ್ಲಿ ಕಂದಾಯ ಗ್ರಾಮಗಳ ಕುರಿತು ಜಿಲ್ಲಾವಾರು ಪುನರಾವಲೋಕನೆ ಮಾಡಿ ಪ್ರಸ್ತಾವನೆಗಳನ್ನು ಕೂಡಲೇ ಸರ್ಕಾರಕ್ಕೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. • ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಕಂದಾಯ ಇಲಾಖೆ ರವರು ಜಿಲ್ಲಾಧಿಕಾರಿಗಳಿಗೆ ಕಂದಾಯ ಗ್ರಾಮಗಳ ರಚನೆಯ ಕುರಿತಾಗಿ ಸಾಧಿಸಿದ ಪ್ರಗತಿಯ ಬಗ್ಗೆ ಪರಿಶೀಲಿಸಿ, ಅದರ ಮೇಲೆ ಕ್ರಮವಹಿಸಲು ಸೂಚಿಸಿರುತ್ತಾರೆ.

ಕಂಇ 04 ಪಿಎಲ್‌ಸಿ 2021

(ಆರ್. ಅಶೋಕ್)

ಕಂದಾಯ ಸಚಿವರು